ಅಧ್ಯಕ್ಷರು: ಈಗ ಬಂದು ಪ್ರಕಟಣೆ ಇದೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ 12ನೇ ವಿಧಾನಸಭೆಗೆ ಚುನಾಯಿತರಾಗಿದ್ದ ಶ್ರೀ ಸಿದ್ದರಾಮಯ್ಯನವರು ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ಸದರಿ ರಾಜೀನಾಮೆಯನ್ನು ಈ ದಿನ, 18ನೇ ಜುಲೈ 2006ರಂದು ಅಂಗೀಕರಿಸಲಾಗಿದೆ.

ಅಧ್ಯಕ್ಷರು: ಈಗ ನಿಯಮ 69ರ ಮೇರೆಗೆ ಏನು ಚರ್ಚೆ ನಡೆದಿತ್ತು ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಆರ್. ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಉಳಿದ ನಮ್ಮ ಗಮನ ಸೆಳೆಯುವ ಸೂಚನೆಗಳನ್ನು ತಾವು ನಾಳೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ಇನ್ನೂ ಸ್ವಲ್ಪ ಗಮನ ಸೆಳೆಯುವ ಸೂಚನೆಗಳು ಉಳಿದಿದೆ. ಉಳಿದಿರುವ ಗಮನ ಸೆಳೆಯುವ ಸೂಚನೆಗಳನ್ನೆಲ್ಲಾ ನಾನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಎಷ್ಟು ಹೊತ್ತಿಗೆ ಉತ್ತರ ಕೊಡುತ್ತಾರೆ ಎಂಬುದು ಖಚಿತವಾಗಿ ಗೊತ್ತಿರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲ. Modestly ನೋಡಿ. If you can wait for some time. ಇಷ್ಟೊತ್ತಿಗೆ reply ಕೊಡುತ್ತಾರೆ ಎಂಬುದು ಮೊದಲೇ ನಿರ್ಧಾರವಾಗಿರಲಿಲ್ಲ. ಆ ರೀತಿಯ ಸೂಚನೆ ಇದ್ದಿದ್ದರೆ ನಾವು ಆ ಬಗ್ಗೆ ಅವರಿಗೆ ಹೇಳಬಹುದಾಗಿತ್ತು. ನೋಡಿ, I leave it to your wisdom. ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲದಿರುವಾಗ ಉತ್ತರ ಕೊಡುವುದು ಸರಿಯೇ ಎಂಬುದನ್ನು ತಾವೇ ನೋಡಿ.

ಅಧ್ಯಕ್ಷರು: ಇವತ್ತು ಚರ್ಚೆಗೆ ಉತ್ತರ ಇದೆಯೇ ಎಂದು ನನ್ನನ್ನು ಕೇಳಿದಾಗ ನಾನು ಉತ್ತರ ಇವತ್ತೇ ಇದೆ, ಆದರೆ ಟೈಮ್ ಗೊತ್ತಿಲ್ಲವೆಂದು ಹೇಳಿದ್ದೆ.

ಶ್ರೀ ಡಿ.ಕೆ. ಶಿವಕುಮಾರ್: ಕೆಲವರು ಬೆಳಿಗ್ಗೆ ಉತ್ತರ ಅನ್ನುತ್ತಿದ್ದರು. ಈಗಲೇ ಉತ್ತರ ಕೊಡುತ್ತಾರಾ?

ಅಧ್ಯಕ್ಷರು: ಹೌದು, ಈಗಲೇ ಉತ್ತರ ಕೊಡುತ್ತಾರೆ. ಎಷ್ಟು ಗಂಟೆಗೆ ಎಂಬುದು ನನಗೆ ತಿಳಿಸಿಲ್ಲವೆಂದು ನಾನು ಅವರಿಗೆ ಹೇಳಿದ್ದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಈಗ ನಮ್ಮ ಯಾವುದೇ ಲೆಕ್ಕಾಚಾರ ನಡೆಯುತ್ತಿಲ್ಲವಲ್ಲಾ.

(ಗೊಂದಲ)

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ದಯವಿಟ್ಟು ಎರಡು ನಿಮಿಷ ಅವಕಾಶ ಕೊಡಿ. ನಮ್ಮಲ್ಲಿಯ ಜ್ವಲಂತ ಸಮಸ್ಯೆಯೊಂದರ ಬಗ್ಗೆ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಿ. ಹೇಗೂ ಟೈಮ್ ಇದೆ.

ಅಧ್ಯಕ್ಷರು: ಆಯಿತು, ಪ್ರಸ್ತಾಪ ಮಾಡಿ.

10. ಅಧ್ಯಕ್ಷರ ಅಪ್ಪಣೆ ಮೇರೆಗೆ.

(ಅ) ವಿಷಯ: ರೈತರಿಗೆ ಶೇಕಡ 4ರ ಬಡ್ಡಿ ದರದಲ್ಲಿ ಸಾಲ ನೀಡಲು ಅನುಕೂಲವಾಗುವಂತೆ ಕೆಸಿಸಿ ಬ್ಯಾಂಕಿಗೆ ನಬಾರ್ಡ್‌ನಿಂದ ಸಾಲ ಪಡೆಯಲು ಸರ್ಕಾರದ ಗ್ಯಾರಂಟಿ ನೀಡುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್ (ಗದಗ): ಸಾರ್, ತಮಗೆ ಗೊತ್ತಿದ್ದ ಪ್ರಕಾರ, ಧಾರವಾಡ ಕೆಸಿಸಿ ಬ್ಯಾಂಕ್ ರೈತರಿಗೆ ಶೇಕಡ 4ರ ಬಡ್ಡಿದರದಲ್ಲಿ ಸಾಲ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಾವು ಅದರ ಎಂ.ಡಿ. ಜೊತೆಗೆ ಮಾತನಾಡಿದೆವು. ತಾವು ಮೊನ್ನೆ ಆರ್ಥಿಕ ಇಲಾಖೆಯಿಂದ 14 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಸಿದಿರಿ. ಅದರಿಂದ ಸಾಲ ಕೊಡಲಿಕ್ಕಾಗುವುದಿಲ್ಲ. ಅವರಿಗೆ ಸಾಲ ಸಿಗಬೇಕೆಂದರೆ ನಬಾರ್ಡ್‌ನಿಂದ re-imbursement ಆಗಬೇಕು. ಅಪೆಕ್ಸ್ ಬ್ಯಾಂಕ್‌ನವರು ಆ ವ್ಯವಸ್ಥೆ ಮಾಡಬೇಕು. ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರ ಜೊತೆಗೆ ಮಾತನಾಡಿದಾಗ, ಅದು ತೊಂದರೆಯಾಗುತ್ತದೆ ಎನ್ನುವಂತಹ ಮಾತನ್ನು ಅಧ್ಯಕ್ಷರು ವ್ಯಕ್ತಪಡಿಸಿದರು. ಇದಕ್ಕೆ ದಾರಿ ಏನು ಎಂದು ನಾವು ಅಧ್ಯಕ್ಷರನ್ನು ಕೇಳಿದೆವು. ರಾಜ್ಯ ಸರ್ಕಾರದವರು ಗ್ಯಾರಂಟಿ ಕೊಟ್ಟರೆ, ಕೆ.ಸಿ.ಸಿ. ಬ್ಯಾಂಕ್‌ನವರು ನೇರವಾಗಿ ನಬಾರ್ಡ್‌ನಿಂದ ಸಾಲ ತೆಗೆದುಕೊಳ್ಳಬಹುದು, ನಿಮ್ಮ ರೈತರಿಗೆ ಆಗ ಹಂಚಲಿಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ದಯವಿಟ್ಟು ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ, ಈ ವ್ಯವಸ್ಥೆ ಮಾಡಿಸಿ, ಇಲ್ಲದಿದ್ದರೆ ಆ ಹಳೆಯ ಧಾರವಾಡ ಜಿಲ್ಲೆಯ ಮೂರೂ ಜಿಲ್ಲೆಗಳ ರೈತರಿಗೆ ಬಹಳ ತೊಂದರೆಯಾಗುತ್ತದೆ ಎನ್ನುವಂತಹ ಮಾತನ್ನು ಅಧ್ಯಕ್ಷರು ಹೇಳಿದರು. ಎಂ.ಡಿ.ಯವರೂ ಸಹ, ಹೌದು ಸಾರ್, ಇಲ್ಲಿ ಪರಿಸ್ಥಿತಿ ಹೀಗೆಯೇ ಇದೆ ಎಂದು